

ನನ್ನ ಕೆನ್ನೆಗೆ ಹೊಡೆದ. ನಾನು ಮಂಚದ ಕೆಳಗಿದ್ದ ಚಪ್ಪಲಿ ತಗಂಡು ಅವನ ಕಡೆಗೆ ಎಸೆದೆ. ಆಮೇಲೆ ಅವನು ಬೆಡ್ ರೂಮಿಂದ ಹೊರಕ್ಕೆ ಹೋಗಿಬಿಟ್ಟ. ಸ್ವಲ್ಪ ಹೊತ್ತು ಬಿಟ್ಟು ಬಂದು ಮಲಗ್ತಾನೆ ಅಂದುಕೊಂಡು ನಾನು ಮಲಗಿದೆ. ಎರಡೂ ಹತ್ತಕ್ಕೆ ಎಚ್ಚರವಾಗಿ ನೋಡಿದರೆ ಅವನು ಮನೆಯಲ್ಲಿ ಇರಲಿಲ್ಲ! ಈಗ ಸ್ವಲ್ಪಹೊತ್ತಿನ ಮೊದಲು ಮನೆಯಿಂದ ಹೊರಕ್ಕೆ ಬಂದು ನೋಡಿದೆ. ಗ್ಯಾರೇಜಿನಲ್ಲಿ ಅವನ ಕಾರಿಲ್ಲ! ಅಭಿ ಎಲ್ಲಿಗೆ ಹೋಗಿರಬಹುದು...?

'ಅಭಿಗೆ ಬರೋ ಮೇಗೆ ಮೂವತ್ಮೂರು ತುಂಬುತ್ತೆ. ಅವಳಿಗೆ ನಲವತ್ತೆರಡು. ಮುರ್ರಾ ಎಮ್ಮೆ ಥರ ಇದ್ದಾಳೆ. ಅವಳು ಅದೇನು ಮೋಡಿ ಮಾಡಿದ್ದಾಳೋ? ಈಚೆಗೆ